Tumbe International e-Magazine
ISSN : 2581-7728
A Multilanguage Magazine
Issue-1
Volume-5
Jan-June: 2022

# 360° ಏಲಿಯನ್

**ಚಿರಂಜೀವಿ ಕೆ**
U11GT21A0004
ಬಿಎ ಮೊದಲನೇ ವರ್ಷ, ದ್ವಿತೀಯ ಸೆಮಿಸ್ಟರ್
ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತುಮಕೂರು -572104
chiranjeevik17082003@gmail.com Ph.no: 9206635888

ನಾನೀಗ ಪ್ರಸ್ತುತಪಡಿಸಲು ಹೊರಟಿರುವುದು ಅನ್ಯಗ್ರಹ ಜೀವಿ ಏಲಿಯನ್ ಕುರಿತು ಅಲ್ಲ. ನಮ್ಮ ನಡುವೆಯೇ ವಾಸಿಸುತ್ತಿರುವ ಸೌತ್ ಆಫ್ರಿಕಾದ ಎ.ಬಿ.ಡಿ ವಿಲಿಯರ್ಸ್ ಬಗ್ಗೆ. ಹೌದು ಎ.ಬಿ.ಡಿ ವಿಲಿಯರ್ಸ್ ಅವರು ಅಂತರಾಷ್ಟ್ರೀಯ ಕ್ರಿಕೆಟಿಗ. ಅವರು ತಮ್ಮ ದೇಶ ಸೌತ್ ಆಫ್ರಿಕಾ ತಂಡವನ್ನು ಪ್ರತಿನಿಧಿಸುತ್ತಾರೆ. ಇವರು ತಮ್ಮ ಆಟದ ಶೈಲಿಯ ಮೂಲಕ ವಿಶ್ವದಾದ್ಯಂತ ಮಿಸ್ಟರ್ 360°, ಏಲಿಯನ್ ಡಿವಿಲಿಯರ್ಸ್, ಎಂಬ ಖ್ಯಾತಿಯನ್ನು ಗಳಿಸಿದ್ದಾರೆ. ಇವರು ಸೌತ್ ಆಫ್ರಿಕಾ ಅಲ್ಲದೇ ಬೇರೆ ದೇಶಗಳಲ್ಲಿಯೂ, ಸ್ಥಳೀಯ ಲೀಗ್ ಗಳಲ್ಲಿ ಆಡಿ ಪ್ರಪಂಚದ ಮೂಲೆ ಮೂಲೆಯಲ್ಲೂ ಅಭಿಮಾನಿ ಬಳಗವನ್ನು ಹೊಂದಿದ್ದಾರೆ. ಹಾಗೂ ಇವರು ಎ.ಬಿ.ಡಿ ಎಂದೇ ಎಲ್ಲರಿಗೂ ಚಿರಪರಿಚಿತ.




ಎ.ಬಿ.ಡಿ ಅವರು 1984ರ ಫೆಬ್ರವರಿ 17ರಂದು ದಕ್ಷಿಣ ಆಫ್ರಿಕಾದ ಪ್ರೆಟೋರಿಯ ಎಂಬಲ್ಲಿ ಜನಿಸುತ್ತಾರೆ. ಇವರ ಪೂರ್ಣ ಹೆಸರು "ಅಬ್ರಹಾಂ ಬೆಂಜಮೀನ್ ಡಿ ವಿಲಿಯರ್ಸ್". ಆದ್ದರಿಂದ ಇವರನ್ನು ಜನರು ಎ.ಬಿ.ಡಿ ಎಂದು ಕರೆಯುತ್ತಾರೆ. ಬೌಲರ್ ಎಸೆದ ಚೆಂಡನ್ನು ಮೈದಾನದ ಸುತ್ತಲೂ 360°ಗೆ ಬಾರಿಸುವ ವಿಶ್ವದ ಏಕೈಕ ಬ್ಯಾಟ್ಸ್ಮನ್. ಮೈದಾನ ಯಾವುದೇ ಇರಲಿ ಎದುರಾಳಿ ಯಾರೇ ಆಗಿರಲಿ ಎ.ಬಿ.ಡಿ ಬ್ಯಾಟ್ ಹಿಡಿದು ನಿಂತರೆ ಗೆಲುವು ಖಚಿತ. ಬೌಲಿಂಗ್ ಮಾಡುವ ಬೌಲರ್ ಕಣ್ಣಲ್ಲಿ ಭಯ ಉಂಟಾಗುವುದು ಸಾಮಾನ್ಯ ಏಕೆಂದರೆ ಇವರು ಸಿಡಿದು ನಿಂತರೆ ಇವರನ್ನು ಎಂಟರ್ಟೈನ್ಮೆಂಟ್ ಕಿಂಗ್ ಎನ್ನುತ್ತಾರೆ. ಇವರು ಸಿಕ್ಸರ್ ಸುರಿಮಳೆಯನ್ನೇ ತರುತ್ತಾರೆ. ಎ.ಬಿ.ಡಿ ಗೆ ಎ.ಬಿ.ಡಿ ಯೇ ಸರಿಸಾಟಿ. ಎ.ಬಿ.ಡಿಯನ್ನು ಮೀರಿಸುವ ಆಟಗಾರ ಹಿಂದೆ ಹುಟ್ಟಿಲ್ಲ ಮುಂದೆ ಹುಟ್ಟಲ್ಲ. ಎ.ಬಿ.ಡಿ ಒಬ್ಬ ಮಹಾನ್ ಕ್ರಿಕೆಟಿಗನಲ್ಲದೇ "ರಗ್ಬಿ, ಟೆನ್ನಿಸ್, ಗಾಲ್ಫ್, ಸ್ವಿಮಿಂಗ್" ಹೀಗೆ ಬಾಲ್ಯದಲ್ಲಿ ಎಲ್ಲಾ

ಕ್ರೀಡೆಯಲ್ಲೂ ಮುಂದಿದ್ದರು. ಆದರೂ ಕ್ರಿಕೆಟ್ ಮೇಲೆ ಹೆಚ್ಚಿನ ಆಸಕ್ತಿ ಇದ್ದ ಕಾರಣ ಇವರು ಕ್ರಿಕೆಟಿಗರಾಗಿ ಮುಂದುವರೆದರು ಇಂದು ಅದು ಇತಿಹಾಸ.

ಎ.ಬಿ.ಡಿ ಅವರು 2004ರಲ್ಲಿ ಅಂತರಾಷ್ಟ್ರೀಯ ಕ್ರಿಕೆಟ್ ಗೆ ಪಾದಾರ್ಪಣೆ ಮಾಡಿದರು. ಇವರು 2007ರಲ್ಲಿ ನಡೆದ ವಿಶ್ವಕಪ್ ಪಂದ್ಯದಲ್ಲಿ ಮೊದಲ ನಾಲ್ಕು ಪಂದ್ಯಗಳಲ್ಲಿ ಸತತ ಶೂನ್ಯಕ್ಕೆ ವಿಕೆಟ್ ಒಪ್ಪಿಸಿ ನಿರ್ಗಮಿಸುತ್ತಾರೆ. ಆದರೆ ಧೃತಿಗೆಡದ ಎ.ಬಿ.ಡಿ ಮುಂದಿನ ವರ್ಷವೇ ಟೆಸ್ಟ್ ಕ್ರಿಕೆಟ್ ನಲ್ಲಿ ದ್ವಿಶತಕವನ್ನು ದಾಖಲಿಸಿ ವಿಶ್ವಕ್ಕೆ ತಮ್ಮ ಸಾಮರ್ಥ್ಯವನ್ನು ತಿಳಿಸುತ್ತಾರೆ. ತದನಂತರ ಎಂದೂ ತಿರುಗಿ ನೋಡದ ಎ.ಬಿ.ಡಿ ಅವರು 2010ರಲ್ಲಿ ಐಸಿಸಿ ಪ್ಲೇಯರ್ ಆಫ್ ದಿ ಇಯರ್ ಅವಾರ್ಡ್ ಅನ್ನು ಪಡೆಯುತ್ತಾರೆ. 2011ರ ವಿಶ್ವಕಪ್ ನಲ್ಲಿ ದಕ್ಷಿಣ ಆಫ್ರಿಕಾ ತಂಡದ ನಾಯಕನಾಗಿ ಗಮನ ಸೆಳೆದ ಎ.ಬಿ.ಡಿ ತಮ್ಮ ಬ್ಯಾಟ್ ಮೂಲಕ ಘರ್ಜಿಸುತ್ತಾರೆ.

ಎ.ಬಿ.ಡಿ ಅವರು ಕ್ರಿಕೆಟ್ ನ T20, ಟೆಸ್ಟ್, ಒಡಿಐ ಎಂಬ ಮೂರು ಮಾದರಿಯ ಕ್ರಿಕೆಟ್ ನಲ್ಲಿ ಪಂಟರ್ ಆಗಿದ್ದರು. ಲೀಲಾಜಾಲವಾಗಿ ಕ್ರಿಕೆಟ್ ಆಡುತ್ತಿದ್ದ ಎ.ಬಿ.ಡಿ ಅವರು ತಮ್ಮ ಹೆಸರಿನಲ್ಲಿ ಅನೇಕ ಸರ್ವಕಾಲಿಕ ದಾಖಲೆಗಳನ್ನು ಹೊಂದಿದ್ದಾರೆ. ಇವರು ಕ್ರಿಕೆಟ್ ನಲ್ಲಿ ಅತಿ ವೇಗದ 50, 100, 150 ರನ್ ಗಳಿಸಿದ ಸಾಧನೆ ಮಾಡಿದ್ದಾರೆ.

| **ರನ್** | **ಎಸೆತ** |
|---|---|
| 16 | 50 |
| 31 | 100 |
| 64 | 150 |

ಎ.ಬಿ.ಡಿ ಒಬ್ಬ ಬ್ಯಾಟ್ಸ್‌ಮನ್ ಮಾತ್ರವಲ್ಲದೆ ಪ್ರಪಂಚದ ಅತ್ಯುತ್ತಮ ಕ್ಷೇತ್ರ ರಕ್ಷಕ ಕೂಡ ಹೌದು, ವಿಕೆಟ್ ಕೀಪರ್ ಕೂಡ ಹೌದು. ಗಾಳಿಯಲ್ಲಿ ಹಾರಿ ಅಮೋಘವಾಗಿ ಚೆಂಡನ್ನು ಹಿಡಿಯುವ ಇವರನ್ನು ಜನರು ಸೂಪರ್ ಮ್ಯಾನ್ ಎಂದು ಕರೆಯುತ್ತಾರೆ.

**ಆಪತ್ಬಾಂಧವನಾಗಿ ಎ.ಬಿ.ಡಿ**

ಎ.ಬಿ.ಡಿ ಅವರು ಅಂತರಾಷ್ಟ್ರೀಯ ಕ್ರಿಕೆಟ್ ಅಲ್ಲದೆ ದೇಶಿಯ ಟೂರ್ನಿಗಳಲ್ಲೂ ಬಹಳ ಜನಪ್ರಿಯರಾಗಿದ್ದಾರೆ. ಎ.ಬಿ.ಡಿ ಅವರು ಭಾರತದ ಇಂಡಿಯನ್ ಪ್ರೀಮಿಯರ್ ಲೀಗ್ (IPL) ನಲ್ಲಿ ಸಹ ಆಡಿದ್ದಾರೆ. ಇವರು ಆರಂಭದ ಮೂರು ವರ್ಷ ಡೆಲ್ಲಿ ತಂಡದಲ್ಲಿ ಆಡಿದರು, ನಂತರ 2011ರಲ್ಲಿ ನಮ್ಮ ಆರ್‌ಸಿಬಿ ತಂಡ ಇವರನ್ನು ಖರೀದಿ ಮಾಡಿತು. ಇವರು 2011 ರಿಂದ 2021 ರವರೆಗೆ 10 ವರ್ಷಗಳ ಕಾಲ ಆರ್ಸಿಬಿ ತಂಡದಲ್ಲಿ ಆಡಿ ಲಕ್ಷಾಂತರ ಅಭಿಮಾನಿಗಳನ್ನು ಸಂಪಾದಿಸಿದ್ದಾರೆ. ಸೋಲುವ ಪಂದ್ಯವನ್ನು ಏಕಾಂಗಿಯಾಗಿ ಹೋರಾಡಿ ಅನೇಕ ಬಾರಿ ಆರ್ಸಿಬಿಯನ್ನು ಗೆಲುವಿನ ದಡಕ್ಕೆ ಸೇರಿಸಿದ್ದಾರೆ. ತಂಡದ ಎಲ್ಲಾ ಆಟಗಾರರು ಕೈ ಕೊಟ್ಟರೂ ಅಥವಾ ವಿಫಲರಾದರು ಅಭಿಮಾನಿಗಳಿಗೆ ನಮ್ಮ ಎ.ಬಿ.ಡಿ ಇದ್ದಾರೆ ಎನ್ನುವ ಧೈರ್ಯ. ಎಷ್ಟೋ ಬಾರಿ ಇಂಥ ಪಂದ್ಯಗಳನ್ನು ಗೆಲ್ಲಿಸಿದ್ದು ಇವರನ್ನು ರಾಯಲ್ ಚಾಲೆಂಜರ್ಸ್ ತಂಡದ ಆಪತ್ಬಾಂಧವ ಎಂದು ಕರೆಯುತ್ತಾರೆ. ಇವರ ಮೇಲೆ ನಮ್ಮ ಕನ್ನಡಿಗರಿಗೆ ಎಷ್ಟು ಹೆಮ್ಮೆ ಇದೆ ಎಂದರೆ ಬೆಂಗಳೂರಿನ ಒಂದು ರಸ್ತೆಗೆ ಎ.ಬಿ.ಡಿ

ವಿಲಿಯರ್ಸ್ ರಸ್ತೆ ಎಂದು ನಾಮಕರಣ ಮಾಡಿದ್ದಾರೆ. ಇನ್ನು ಎಬಿ ಡಿ ಅವರಿಗೆ ಬೆಂಗಳೂರಿನ ಜನತೆ ಕಂಡರೆ ಬಹಳ ಪ್ರೀತಿ ಅನೇಕ ಬಾರಿ ಸ್ವತಹ ಅವರೇ ಹೇಳಿದ್ದಾರೆ. ಕೆಲವೊಮ್ಮೆ ಕನ್ನಡದ ಹಾಡುಗಳನ್ನು ಹಾಡುತ್ತಾರೆ. ಈ ಬಾರಿ ಗಣೇಶೋತ್ಸವ ಸಂದರ್ಭದಲ್ಲಿ ಎ.ಬಿ.ಡಿ ಅವರ ಮೂರ್ತಿ ಹೋಲುವ ಗಣೇಶನನ್ನು ಪ್ರತಿಷ್ಠಾಪನೆ ಮಾಡಿರುವುದು ಎ.ಬಿ.ಡಿ ಮೇಲೆ ಇರುವ ಪ್ರೀತಿಗೆ ನಿದರ್ಶನವಾಗಿದೆ. ಇನ್ನು ಎ.ಬಿ.ಡಿ ಅವರು ಪ್ರತಿ ಬಾರಿ ಬೆಂಗಳೂರಿಗೆ ಬಂದಾಗ ಬೆಂಗಳೂರನ್ನು ಆಟೋರಿಕ್ಷಾದಲ್ಲಿ ಸುತ್ತಾಡುತ್ತಾ ವೀಕ್ಷಣೆ ಮಾಡುತ್ತಾರೆ. ಹಾಗೂ ಎ.ಬಿ.ಡಿ ಅವರು ಬೆಂಗಳೂರನ್ನು ತನ್ನ ಎರಡನೇ ಹೋಮ್ ಗ್ರೌಂಡ್ ಎಂದು ಹೇಳುವ ಮೂಲಕ ಅಭಿಮಾನಿಗಳ ಮನವನ್ನು ನಿರಂತರವಾಗಿ ಗೆಲ್ಲುತ್ತಾರೆ.

**ಎ.ಬಿ.ಡಿ ಅವರ ಬ್ಯಾಟಿಂಗ್ ರೆಕಾರ್ಡ್:**

| ಮಾದರಿ | ಪಂದ್ಯಗಳು | ರನ್ ಗಳು | ಸರಾಸರಿ | ಸ್ಟ್ರೈಕ್ ರೇಟ್ |
|---|---|---|---|---|
| **ಟೆಸ್ಟ್ (2004-2018)** | 114 | 8765 | 50.7 | 54.5 |
| **ಏಕದಿನ (2005-2018)** | 228 | 9577 | 53.5 | 101.1 |
| **T201 (2006-2017)** | 78 | 1672 | 26.1 | 135.2 |
| **IPL (2008-2021)** | 184 | 5162 | 39.7 | 151.7 |
| **1st Class (2003-2018)** | 141 | 10689 | 49.7 | 56.2 |
| **List A (2003-2018)** | 263 | 11123 | 53.5 | 99.5 |
| **T20 (2006-2021)** | 340 | 9424 | 37.2 | 150.1 |